ಹೇಳಲು ಕುಳಿತೆ. 'ಈಗ ಹೇಳು' ಅಂದರು. ಏನು ಹೇಳಲಿ. ಎಲ್ಲಿಂದ ಹೇಳಲಿ. ನನ್ನ ಕತೆ ನನಗೆ ಸರಿಯಾಗಿ ಗೊತ್ತಿದ್ದರೆ ತಾನೇ! ಸಂಕ್ಷಿಪ್ತವಾಗಿ ನನಗೆ ಗೊತ್ತಿದ್ದನ್ನು ಹೇಳಿದೆ. ಯಾರು ಯಾರು ನನ್ನನ್ನು ಹೇಗೆ ಹೇಗೆ ಉಪಯೋಗಿಸಿದರು ಎಂಬುದು ನನಗೆ ತಿಳಿದಿದ್ದರೆ ತಾನೇ! ನನ್ನ ಕತೆ ಬೇಗನೇ ಮುಗಿದು ಹೋಯಿತು. ನಾಗಪುರದ ಸಾಧು ನನ್ನ ಕತೆಯಲ್ಲಿ ಬೇಗನೇ ಬಂದು ಬಿಟ್ಟ. 'ಸದ್ಯ ಅವನಿಗೆ ದೊಡ್ಡ ನಮಸ್ಕಾರ ಪಳ್ಳಿ. ಇರಲಿ. ಈಗ ನಿನ್ನ ವಯಸ್ಸೆಷ್ಟು ಗೊತ್ತೇ?' ಕೇಳಿದರು. 'ಇಲ್ಲ' ಎಂದು ತಲೆ ಆಡಿಸಿದೆ. ಅವರೇ ಎಣಿಸಿ ಹೇಳಿದರು. 'ಇಪ್ಪತ್ತಮೂರು ಆಯಿತಲ್ಲ!' ನನ್ನನ್ನೇ ನೋಡತೊಡಗಿದರು. ಅವರ ಕಣ್ಣಲ್ಲಿ ವಿಪರೀತ ವೇದನೆ, ಅಸಹಾಯಕತೆ, ಸತ್ತ ಕನಸು... ಕಂಡಿತು. 'ಎನ್ನ ಆಚೀ?' ಮೆಲ್ಲನೆ ಕೇಳಿದೆ. ಅವರು ಹೇಳಿದರು ನನ್ನನ್ನು ಕುರಿತು ಅವರು ಕಟ್ಟಿದ ಸಾವಿರ ಸಾವಿರ ಕನಸುಗಳನ್ನು. ನನ್ನನ್ನು ಜಗತ್ತಿನ ಅದ್ಭುತ ನರ್ತಕಿಯನ್ನಾಗಿ ಮಾಡಬೇಕೆಂದಿದ್ದ ಕನಸನ್ನು. ನಕ್ಕೆ... ನನಗೆ ಕನಸೂ ಇಲ್ಲ, ನನಸೂ ಇಲ್ಲ, ಭವಿಷ್ಯವೂ ಇಲ್ಲ, ಭೂತವೂ ಇಲ್ಲ... ನನಗೆ ಆಸೆಗಳೇ ಇಲ್ಲವಲ್ಲ... ಯಾಕೆ? ಇದ್ದದ್ದು ಒಂದೇ ಆಸೆ ಅಮ್ಮನ ಹತ್ತಿರ ಹೋಗಬೇಕು ಅನ್ನುವುದು. ಅದೂ ಈಡೇರಲಿಲ್ಲ. ಅಷ್ಟರಲ್ಲಿ ಅವರೇ ಹಿಂಜರಿಯುತ್ತಾ ಕೇಳಿದರು:

'ಕುಳಂದೆ... ಆಹಲ್ಯಾ?...' (ಮಕ್ಕಳು ಆಗಲಿಲ್ಲವಾ?)

ಕುಳಂದೇ... ಕುಳಂದೇ... ಕಣ್ಣು ಕಣ್ಣು ಬಿಟ್ಟೆ.. ಗೊತ್ತಿಲ್ಲ ... 'ತೆರಿಯಾದ್...' ನೆನಪಿಗೆ ತಂದುಕೊಳ್ಳಲು ಹೇಳಿದರು. ಬಹಳ ಪ್ರಯತ್ನ ಪಟ್ಟೆ. ಏನೋ ಅಸ್ಪಷ್ಟ ಚಿತ್ರಗಳು. ಎಲ್ಲೋ ಒಂದು ಮಗು ಅತ್ತ ಸದ್ದು, ಚಿಂದಿ ಸೀರೆಯಲ್ಲಿ ದಪ್ಪ ಹೊಟ್ಟೆ ಹೊತ್ತು ಹೋಗುತ್ತಿರುವ ಹೆಣ್ಣು, ಆಸ್ಪತ್ರೆಯಲ್ಲಿ ನೋವು ಅನುಭವಿಸುತ್ತಿರುವ ಹೆಣ್ಣು... ಸಣ್ಣ ಮಗುವೊಂದು 'ಅಮ್ಮಾ...' ಎಂದು ಕರೆಯುತ್ತಾ ದೂರ ದೂರ ಸರಿದಂತೆ... 'ತೆರಿಯಾದ್ ಟೀಚರ್... ತೆರಿಯಾದ್...' ಬಿಕ್ಕಿ ಬಿಕ್ಕಿ ಅತ್ತೆ. ಬಹಳ ಹೊತ್ತು ಅಳುತ್ತಲೇ ಇದ್ದೆ. ನಾನು ಅತ್ತದ್ದು ಯಾಕೆ? ಮಗು ಕಳೆದದ್ದಕ್ಕೋ, ಅಮ್ಮ ಕಳೆದದ್ದಕ್ಕೋ ಅಥವಾ ಏನೂ ತಿಳಿಯದಿದ್ದಕ್ಕೋ... ಗೊತ್ತಿಲ್ಲ. ಮಲಗಿಕೊಂಡೆ. ಸಾಧುವಿನ ಮುಖ ಕಣ್ಣ ಮುಂದೆ ಬಂತು 'ನೀನು ಏನು ಎಂಬುದನ್ನು ಮೊದಲು ತಿಳಿದುಕೋ ಮಗು. ಬದುಕು ಜಾರುತ್ತಲೇ ಇರುತ್ತದೆ. ಆದರೆ ನಿನ್ನನ್ನ ನೀನು ಅರಿತ ನಂತರ ಬದುಕು ನಿನ್ನನ್ನು ಹಿಡಿದುಕೊಳ್ಳುತ್ತದೆ... ಯಾವತ್ತೂ ಭಯಪಡಬೇಡ... ನಿನ್ನ ಜೊತೆಯಲ್ಲಿ ನಾನು ಸದಾಕಾಲ ಇರುತ್ತೇನೆ... ನನ್ನನ್ನು ನಂಬು...'

ಮರುದಿನ ಟೀಚರ್, 'ಅಮ್ಮಅಪ್ಪನ ನಿನ್ನನ್ನ ಹೇಗೆ ಸೇರಿಸಲ್ಲ ನಾನೂ ನೋಡ್ತೀನಿ. ಏಳು ತಿಂಡಿ ತಿನ್ನು...' ಅಂದು ತಿಂಡಿಯ ನಂತರ ನನಗೆ ಒಳ್ಳೆಯ ಸೀರೆ ಉಡಿಸಿ ಅಲಂಕರಿಸಿದರು. ಕನ್ನಡಿಯಲ್ಲಿ ನೋಡಿಕೊಂಡೆ. ಬಹುಶಃ ನನ್ನ ನೆನಪಿನಲ್ಲಿ ಇವತ್ತೇ ನಾನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವುದು. ನಿರ್ಲಿಪ್ತ ಸುಂದರಿ ಅನ್ನಿಸಿತು. ಮುಖ್ಯವಾಗಿ ಕಣ್ಣುಗಳು... ನೋಡಿದೆ. ಅದರೊಳಗೆ ಸಾಧು 'ಪ್ರಪಂಚ ಬಹಳ ಕೆಟ್ಟದಿದೆ ಮಗಳೇ... ಆದರೆ ನಾನು ಇದ್ದೇನೆ. ಧೈರ್ಯವಾಗಿರು...' ಕೇವಲ ಹೊರಗಿನ ಪ್ರಪಂಚ ಮಾತ್ರ ಕೆಟ್ಟದ್ದೇ... ಗೊತ್ತಿಲ್ಲ. ಟೀಚರ್ ಹೇಳುತ್ತಿದ್ದರು 'ಎಷ್ಟು ಚೆನ್ನಾಗಿದ್ದೀಯ ನೀನು. ಬೇಡ ಅನ್ನಲು ಅವರಿಗೆ ಹೇಗೆ ಮನಸ್ಸಾಯಿತು?' ನನ್ನನ್ನು ಎಳೆದುಕೊಂಡು ಧಡ ಧಡ ಮನೆಯ ಕಡೆ ನಡೆಯತೊಡಗಿದರು. ವಯಸ್ಸಾದ ಅವರು ಬೇಗ ಬೇಗನೇ ಯಾವ ಹುರುಪಿನೊಂದಿಗೆ ನಡೆಯುತ್ತಿದ್ದರೋ, ನನಗೆ ಸೀರೆಯ ನೆರಿಗೆಯ ಜೊತೆಯಲ್ಲಿ ಆ ವೇಗಕ್ಕೆ ನಡೆಯಲು ಆಗಲಿಲ್ಲ. ಒಂದು ಹಂತದಲ್ಲಿ ಸೀರೆ ಮೇಲೆ ಎತ್ತಿ ಹಿಡಿದು ನಡೆಯತೊಡಗಿದೆ. 'ಎಷ್ಟು ಚುರುಕಾಗಿದ್ದೆ ನೀನು, ಹಳ್ಳಿಗೆ ಹಳ್ಳಿಯೇ ನಿನ್ನನ್ನು ಹೊಗಳುತ್ತಿತ್ತು...